**ದಿನಾಂಕಃ 03-02-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಜೆ.ಆರ್. ವಕೀಲರಿಂದಃ**

ನಾನು ದ್ವಾರನಕುಂಟೆಯಲ್ಲಿ ಜನಿಸಿರುತ್ತೇನೆ. ನನಗೆ 75 ವರ್ಷ ಎಂದರೆ ಸಾಕ್ಷಿಯು 68 ವರ್ಷ ವಯಸ್ಸಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ವಾದಿಯ ತಂದೆ ರಂಗಣ್ಣಮತ್ತು ತಾಯಿ ಗುಂಡಮ್ಮ ಎಂದರೆ ಸರಿ. 1 ನೇ ವಾದಿಯ ತಾತ ಮತ್ತು ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. 1 ನೇ ವಾದಿಯ ತಂದೆ ಹೆಸರು ರಂಗಣ್ಣ ಮತ್ತು ತಾಯಿ ಹೆಸರು ಮಾವರ್ದಮ್ಮ ಎಂದರೆ ಸರಿ. 1 ನೇ ವಾದಿಯ ತಂದೆ ಯಾವಾಗ ಮೃತರಾಗಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ವಾದಿಯ ತಂದೆ 1999 ರಲ್ಲಿ ಮೃತರಾಗಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ವಾದಿಯ ತಾಯಿ ಮಾವರ್ದಮ್ಮ ಸಹ ಮೃತರಾಗಿರುತ್ತಾರೆ. ಆದರೆ ದಿನಾಂಕ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗಳ ತಂದೆ ರಂಗಪ್ಪ ಮತ್ತು 1 ನೇ ವಾದಿಯ ತಂದೆ ರಂಗಪ್ಪನವರು ಖಾಸಾ ಅಣ್ಣ ತಮ್ಮಂದಿರಾಗಿರುವುದಿಲ್ಲ. 1 ನೇ ವಾದಿಯ ತಂದೆ ರಂಗಪ್ಪನವರ ವಂಶವೃಕ್ಷ ಮತ್ತು 1 ಮತ್ತು 2 ನೇ ಪ್ರತಿವಾದಿಗಳ ವಂಶವೃಕ್ಷ ಬೇರೆ ಬೇರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ದ್ವಾರನಕುಂಟೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

2. ನನ್ನ ಪ್ರತಿವಾದ ಪತ್ರದಲ್ಲಿ 1 ನೇ ವಾದಿಯ ತಂದೆಯಾದ ರಂಗಪ್ಪನಿಗೆ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ದಿಃ17.07.2007 ರಲ್ಲಿ ಪಾತಮ್ಮರವರಿಂದ ಖರೀದಿ ಮಾಡಿರುತ್ತೇನೆ. ಪಾತಮ್ಮನ ಗಂಡ ಸಿದ್ದಪ್ಪ ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಅಣ್ಣ ತಮ್ಮಂದಿರಾಗಿರುತ್ತಾರೆ. ನಾನು ದಾವಾ ಸ್ವತ್ತನ್ನು ಖರೀದಿ ಮಾಡಲು ಪಾತಮ್ಮ ಬಂದಾಗ ಪಹಣಿ ಕೊಟ್ಟಿರುತ್ತಾರೆ. ನಾನು ಪಾತಮ್ಮನವರ ಕಡೆಯಿಂದ ಅವರಿಗಾದ ಪಾರಿಕಾತ ಪತ್ರವನ್ನು ಪಡೆದುಕೊಂಡಿರುತ್ತೇನೆ. ಆದರೆ ಅದನ್ನು ಬಿಟ್ಟು ಬೇರೆ ಯಾವುದನ್ನು ಪಡೆದುಕೊಂಡಿರುವುದಿಲ್ಲ. ನಾನು ಸದರಿ ಪಾರಿಕಾತ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. 1 ನೇ ವಾದಿಯ ತಂದೆಯಾದ ರಂಗಪ್ಪನವರಿಗೆ ದಾವಾ ಸ್ವತ್ತು ಮಂಜೂರಾಗಿರುವ ಪತ್ರವನ್ನು ಮತ್ತು ಖಾತೆ-ಪಹಣಿಯನ್ನು ನೋಡಿರುವುದಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ದಾಖಲೆಗಳನ್ನು ನೋಡಿ ಖರೀದಿ ಮಾಡುವ ಜವಬ್ದಾರಿ ಎಂದರೆ ಸರಿ. ಆದರೆ ದಾಖಲೆಗಳನ್ನು ನೋಡಿ ಖರೀದಿ

ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 5 ಎಕರೆ 8 ಗುಂಟೆ ಪೈಕಿ 2 ಎಕರೆ 24 ಗುಂಟೆಗೆ ಕರಾರು ಮಾಡಿಕೊಂಡಿರುತ್ತೇನೆ. ಸದರಿ ಕರಾರು ಪತ್ರವನ್ನು ಪಾತಮ್ಮನವರು ಕೊಟ್ಟಿರುವ ಹಾಗೆ ಪಾರಿಕತ್ತಿನಂತೆ ಪತ್ರ ಬರೆಸಿರುತ್ತೇನೆ. ನಾನು ಕರಾರು ಪತ್ರ ಹಾಗೂ ಪಾರಿಕತ್ತು ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪೋಡಿ ಆಗಿ ದುರಸ್ಥಿ ಆಗಿಲ್ಲ ಎಂದರೆ ಸರಿ, ಆದರೆ ಪಾತಮ್ಮನವರು ಪೋಡಿ ದುರಸ್ಥಿ ಮಾಡಿಕೊಂಡಿರುತ್ತಾರೆ. ಪಾಲು ವಿಭಾಗ ಪತ್ರವು ಪಾತಮ್ಮ, ಪಾಂಡಪ್ಪನ ಮಕ್ಕಳು ಮತ್ತು ರಾಮಣ್ಣನ ಮಗ ಮಾಡಿಕೊಂಡಿರುತ್ತಾರೆ ಆದರೆ ದಿನಾಂಕ ಗೊತ್ತಿಲ್ಲ. ನಿಡಿ 1 ರ ಬಗ್ಗೆ 2007 ರಲ್ಲಿ ಗೊತ್ತಾಗಿರುತ್ತದೆ. ನಿಡಿ 5 ರ ದಾಖಲೆಯನ್ನು ದಿಃ19.08.2024 ರಂದು ಹುಲಿಕುಂಟೆ ವೃತ್ತದಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಆದರೆ ನಿಡಿ 5 ರ ದಾಖಲೆ ಬಗ್ಗೆ ಮೊದಲೇ ನನಗೆ ಗೊತ್ತಿಲ್ಲ. ಪಾರಿಕಾತ ಪತ್ರ ಮತ್ತು ಕರಾರು ಪತ್ರ ಕನ್ನಡದಲ್ಲಿ ಬರೆದಿರುತ್ತದೆ. ಕರಾರು ಪತ್ರವನ್ನು ವಕೀಲರು ತಯಾರು ಮಾಡುವಾಗ ಪಾರಿಕತ್ತು ಮತ್ತು ಪಹಣಿಯನ್ನು ಮಾತ್ರ ಕೊಟ್ಟಿರುತ್ತೇನೆ.

3. ನಿಡಿ 1 ರ ದಾಖಲೆ ಮೇರೆಗೆ 1 ಮತ್ತು 2 ನೇ ಪ್ರತಿವಾದಿಗೆ ಖಾತೆಯನ್ನು ಕಂದಯ ಅಧಿಕಾರಿಗಳು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ 2 ರ ಕ್ರಯ ಪತ್ರವನ್ನು ವಾದಿಗಳ ತಂದೆ ರಂಗಪ್ಪನವರು 1 ನೇ ಮತ್ತು 2 ಪ್ರತಿವಾದಿಗಳ ತಂದೆಗೆ 1 ಎಕರೆ 1 ಗುಂಟೆ ಬರೆದುಕೊಡಲು ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 2 ರ ಕ್ರಯ ಪತ್ರವನ್ನು ಮಾಡುವ ಕಾಲಕ್ಕೆ ವಾದಿಗಳ ತಂದಗೆ ದಾವಾ ಸ್ವತ್ತು ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 2 ರ ಕ್ರಯ ಪತ್ರದಂತೆ 1 ಮತ್ತು 2 ನೇ ಪ್ರತಿವಾದಿಗಳ ತಂದೆಗೆ ಖಾತೆಯಾಗಿರುತ್ತದೆ. ನಿಡಿ 2 ಮತ್ತು 5 ರ ದಾಖಲೆಯಲ್ಲಿರುವ ವಿಸ್ತೀರ್ಣವು ಒಟ್ಟು ವಿಸ್ತೀರ್ಣ ಎಂದರೆ ಸರಿ. ನಿಡಿ 1 ಮತ್ತು 2 ರ ದಾಖಲೆಗೂ ವಾದಿಯ ತಂದೆಗೂ ಸಂಬಂಧ ಇಲ್ಲಎಂದರೆ ಸಾಕ್ಷಿಯು ರಿಜಿಸ್ಟರ್ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದೊಡ್ಡರಂಗಪ್ಪನವರ ಮಗ ರಂಗಪ್ಪನವರು 1 ನೇ ಪ್ರತಿವಾದಿಯ ತಂದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 9 ರ ಪಹಣಿಯಲ್ಲಿರುವ ರಂಗಪ್ಪ ಎಂಬುವವರು 1 ನೇ ವಾದಿಯ ತಂದೆಯೋ ಅಥವಾ 1 ಮತ್ತು 2 ನೇ ಪ್ರತಿವಾದಿಗಳ ತಂದೆ ಯೋ ಎಂದರೆ ನನಗೆ ಗೊತ್ತಿಲ್ಲ. ನಿಡಿ 9 ರ ಪಹಣಿಯಲ್ಲಿರುವ ರಂಗಪ್ಪ 1 ನೇ ವಾದಿಯ ತಂದೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ತಂದೆ ಎಂದು ನುಡಿಯುತ್ತಾರೆ. ನಿಡಿ 10 ರಲ್ಲಿರುವ

ಕೆಂಚಪ್ಪ ಎಂಬುವವರು ದಾವಾ ಸ್ವತ್ತಿನ ಬೇರೆ ಹಿಸ್ಸೆಯ ಮಾಲೀಕರಾಗಿರುತ್ತಾರೆ. ನಿಡಿ 10 ಮತ್ತು 11 ರ ಪಹಣಿಯಂತೆ ವಾದಿಯ ತಂದೆ ದಾವಾ ಸ್ವತ್ತಿನ ಮೇಲೆ ವಿ.ಎಸ್.ಎಸ್. ದ್ವಾರನಕುಂಟೆ ಯಲ್ಲಿ ಲೋನ್ ಪಡೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ 11 ರ ಪಹಣಿಯಲ್ಲಿ ರಂಗಪ್ಪನವರ ಹೆಸರು ಹೊಡೆದು ಕೆಂಚಪ್ಪ ಎಂದು ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ 12 ಮತ್ತು 13 ರ ಪಹಣಿಯಲ್ಲಿ ಖಾತೆ ಮಾಡದೇ ಹೆಸರು ನಮೂದು ಮಾಡಿರುವ ಬಗ್ಗೆ ಗೊತ್ತಿಲ್ಲ. 2007 ರಲ್ಲಿ ಕರಾರು ಪತ್ರದಂತೆ ಪಾತಮ್ಮರವರ ಮೂಲಕ ದಾವಾ ಸ್ವತ್ತನ್ನು ಸ್ಕೆಚ್ ಮಾಡಿಸಲು ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯಂತೆ ಅಳತೆ ಮಾಡಿಲ್ಲ. 1 ನೇ ವಾದಿಯ ತಂದೆ ದಾವಾ ಸ್ವತ್ತಿನ ಬಗ್ಗೆ ದುರಸ್ಥಿ ಮಾಡಲು ಅರ್ಜಿ ಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ನಿಡಿ 3 ರ ಕ್ರಯ ಪತ್ರವನ್ನು ನಾನು ಮತ್ತು ಪಾತಮ್ಮನವರು ಜೊತೆಯಾಗಿ ದಾವಾ ಸ್ವತ್ತನ್ನು ಲಪಟಾಯಿಸಲು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೂ ಮತ್ತು ಪಾತಮ್ಮನವರಿಗೂ ನಿಡಿ 3 ರ ಕ್ರಯ ಪತ್ರವನ್ನು ಮಾಡಿಕೊಡಲು ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

4. 1 ನೇ ವಾದಿ ತಂದೆ ರಂಗಪ್ಪನವರು ಜೀವಂತವಿರುವವರೆವಿಗೂ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು 1 ನೇ ಪ್ರತಿವಾದಿಯ ತಂದೆ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ಓ.ಎಸ್.589/1959 ರ ದಾವೆಗೂ 1 ನೇ ವಾದಿಗೂ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗಳ ದಾವಾ ಸ್ವತ್ತಿನ ಹಕ್ಕಿಗೆ ಹಾಗೂ ಸಾಧೀನಕ್ಕೆ ತೊಂದರೆ ಕೊಟ್ಟಿರುವುದಕ್ಕೆ ಹಾಲಿ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಪೂರ್ತಿ ವಿಸ್ತೀರ್ಣಕ್ಕೆ ಸಾಕ್ಷಿ ಹೇಳಿರುತ್ತೇನೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.